**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ</u>**
**<u>ಚಿಂಚೋಳಿ</u>**

**ಸಿ.ಸಿ. ನಂ. 101/2018**

| | | | |
|---|---|---|---|
| **ಹೆಸರು** | **:** | **ನಾರಾಯಣರೆಡ್ಡಿ** | **ದೋ.ಸಾ. 8** |
| **ತಂದೆಯ ಹೆಸರು** | **:** | **ನಾಗರೆಡ್ಡಿ** | **ಪ್ರಾ.ಸಾ. 5** |
| **ವಯಸ್ಸು** | **:** | **54 ವರ್ಷ** | **ದಿನಾಂಕಃ 10-12-2021** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ರಾಯಕೋಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-7 ಮತ್ತು 9 ರಿಂದ 16 ನನಗೆ ಗೊತ್ತು. ಸದರಿಯವರೆಲ್ಲರೂ ನಮ್ಮೂರಿನವರು.

ಈ ಪ್ರಕರಣದ 1ನೇ ಆರೋಪಿ ಸಂಗಯ್ಯ ಸ್ವಾಮಿಯೊಂದಿಗೆ ನಮ್ಮ ಊರಿನವಳೇ ಆದ ಚಾಸಾ-1 ಕಾಮಾಕ್ಷಿಯ ಮದುವೆ 2016 ನೇ ಇಸವಿಯಲ್ಲಿ ನಮ್ಮ ಊರಿನಲ್ಲಿರುವ ಶಿವಲಿಂಗೇಶ್ವರ ಮಠದಲ್ಲಿ ನಡೆದಿತ್ತು. ಸದರಿ ಮದುವೆಗೆ ನಾನು ಹೋಗಿದ್ದೆ.

ಮದುವೆಯಾದ ಒಂದು ವರ್ಷದ ನಂತರ ಚಾಸಾ-1 ರವರ ಗಂಡ ತಾನು ಸರಕಾರಿ ನೌಕರಿನಿದ್ದರೂ ತನಗೆ ಕಡಿಮೆ ವರದಕ್ಷಿಣೆ ಕೊಟ್ಟಿದ್ದಾರೆ, ಮನೆ ಕಟ್ಟಿಸಲು ಮತ್ತಷ್ಟು ಹಣ ತೆಗೆದುಕೊಂಡು ಬಾ ಎಂದು ಚಾಸಾ-1 ರವರಿಗೆ ಕಿರುಕುಳ ಕೊಟ್ಟರು ಎಂದು ನನಗೆ ಚಾಸಾ-1 ರವರ ತಂದೆ ಬಸ್ಸಯ್ಯಸ್ವಾಮಿ ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ನಾನು ಮತ್ತು ಇತರೆ ನಾಲ್ಕು ಜನ ರುದನೂರು ಗ್ರಾಮಕ್ಕೆ ಹೋಗಿ ಚಾಸಾ-1 ರವರ ಗಂಡ ಸಂಗಯ್ಯಸ್ವಾಮಿಯೊಂದಿಗೆ ಪಂಚಾಯತಿ ಮಾಡಿ ಬಂದಿದ್ದೇವೆ.

ಸದರಿ ಪಂಚಾಯತಿಯಾ 2-3 ತಿಂಗಳ ನಂತರ ಚಾಸಾ-1 ರವರ ತಂದೆ ಬಸ್ಸಯ್ಯ ತನ್ನ ಮಗಳು

ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆಂದು ನನಗೆ ತಿಳಿಸಿದನು. ಚಾಸಾ-1 ಏಕೆ ಪ್ರಜ್ಞೆ ತಪ್ಪಿದ್ದಳೆಂದು ನನಗೆ ಗೊತ್ತಿಲ್ಲ.

ಮೇಲ್ಕಂಡ ವಿಚಾರಗಳನ್ನು ಹೊರತುಪಡಿಸಿ ನನಗೆ ಬೇರೇನೂ ಗೊತ್ತಿಲ್ಲ.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1ನೇ ಆರೋಪಿಯೊಂದಿಗೆ ಚಾಸಾ-1 ರವರೊಂದಿಗೆ ಮದುವೆ ನಿಶ್ಚಿತಾರ್ಥ ನಡೆದಾಗಲೂ ನಾನು ಹಾಜರಿದ್ದೆ ಎನ್ನುವುದು ಸರಿ. ನಮ್ಮ ಗ್ರಾಮದವರೇ ಆದ ಚಾಸಾ-7 ಮತ್ತು 9 ರವರಿದ್ದರು ಎನ್ನುವುದು ಸರಿ. ಸದರಿ ನಿಶ್ಚಿತಾರ್ಥದ ಸಂದರ್ಭದಲ್ಲಿ 1 ರಿಂದ 4 ನೇ ಆರೋಪಿತರು ಚಾಸಾ-1 ರವರ ತಂದೆ ತಾಯಿಯ ಬಳಿ 1ನೇ ಆರೊಪಿಗೆ 6 ತೊಲೆ ಬಂಗಾರ , 2 ಲಕ್ಷ ಹಣ ಮತ್ತು ಗೃಹ ಬಳಕೆಯ ವಸ್ತುಗಳನ್ನು ಕೊಡಬೇಕೆಂದು ಕೇಳಿದ್ದರು ಎನ್ನುವುದು ಸರಿ.

1ನೇ ಆರೋಪಿ ಮತ್ತು ಚಾಸಾ-1 ರವರ ಮದುವೆಯು ದಿನಾಂಕ 10-07-2016 ರಂದು ನಡೆದಿತ್ತು ಎನ್ನುವುದು ಸರಿ. ಮದುವೆಯ ಸಂದರ್ಭದಲ್ಲಿ ಚಾಸಾ-1 ರವರ ತಂದೆ ಬಸ್ಸಯ್ಯಸ್ವಾಮಿ ಆರೋಪಿತರಿಗೆ 6 ತೊಲೆ ಬಂಗಾರ, 2 ಲಕ್ಷ ಹಣ ಮತ್ತು ಗೃಹ ಬಳಕೆಯ ಸಾಮಾನುಗಳನ್ನು ಕೊಟ್ಟಿದ್ದರು ಎನ್ನುವುದು ಸರಿ.

ಮದುವೆಯಾದ 1 ತಿಂಗಳ ನಂತರ ಬಸ್ಸಯ್ಯ ಸ್ವಾಮಿ ನನ್ನನ್ನು, ಚಾಸಾ-7 ಮತ್ತು 9 ರವರನ್ನು ಕರೆಸಿ ತನ್ನ ಮಗಳು ಕಾಮಾಕ್ಷಿಯನ್ನು ಆಕೆಯ ಗಂಡ ಸಂಗಯ್ಯ ಮತ್ತು ಅತ್ತೆ ಸಿದ್ದಮ್ಮ ಸರಿಯಾಗಿ ನೋಡಿಕೊಳ್ಳದೇ ಮನೆ ಕಟ್ಟುತ್ತಿದ್ದೇವೆ, ಹಣದ ಅಗತ್ಯ ಇದ್ದು, ನಿನ್ನ ಮದುವೆಯಲ್ಲಿ ನಿಮ್ಮ ತಂದೆ ಕಡಿಮೆ ವರದಕ್ಷಿಣೆ ಕೊಟ್ಟಿದ್ದಾರೆ, ಅದಕ್ಕೆ ನೀನು ನಿಮ್ಮ ತವರು ಮನೆಯಿಂದ 5 ತೊಲೆ ಬಂಗಾರ ಮತ್ತು 2 ಲಕ್ಷ ಹಣ ತೆಗೆದುಕೊಂಡುಬಾ ಎಂದು ತನಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಡುತ್ತಿದ್ದಾರೆ ಎಂದು ತನಗೆ ತಿಳಿಸಿರುತ್ತಾಳೆ ಎಂಬುದಾಗಿ ನಮಗೆ ಹೇಳಿದನು ಎನ್ನುವುದು ಸರಿ.

ದಿನಾಂಕ 25-04-2017 ರಂದು ನಾನು, ಚಾಸಾ-7, 9 ರವರು ಸಂಗಯ್ಯಸ್ವಾಮಿಯೊಂದಿಗೆ ಆರೋಪಿತರ ಮನೆಗೆ ಹೋಗಿ ಅಲ್ಲಿಗೆ ಚಾಸಾ-15 ಮಲ್ಲಿಕಾರ್ಜುನ ಮತ್ತು ಚಾಸಾ-16 ಬಸವರಾಜ ರವರನ್ನು ಕರೆಸಿ 1 ಮತ್ತು 2ನೇ ಆರೋಪಿತರನ್ನು ನೀವು ಏಕೆ ಚಾಸಾ-1 ರವರಿಗೆ ಕಿರುಕುಳ

ಕೊಡುತ್ತೀರಿ, ಹಾಗೆ ಮಾಡುವುದು ಸರಿಯಲ್ಲ , ಇನ್ನು ಮುಂದೆ ಆ ರೀತಿ ತೊಂದರೆ ಕೊಡಬಾರದೆಂದು ಬುದ್ಧಿ ಮಾತು ಹೇಳಿ ಬಂದಿರುತ್ತೇವೆ ಎನ್ನುವುದು ಸರಿ.

1 ಮತ್ತು 2 ನೇ ಆರೋಪಿತರು ವರದಕ್ಷಿಣೆ ಹಣ ಮತ್ತುಬಂಗಾರ ತೆಗೆದುಕೊಂಡು ಬಾ ಎಂದು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟಿದ್ದರಿಂದಲೇ ಚಾಸಾ-1 ರವರು 11-10-2017 ರಂದು ತನ್ನ ಗಂಡನ ಮನೆಯಲ್ಲಿ ಯಾರು ಇಲ್ಲದಿದ್ದಾಗ ತನ್ನ ಓಡ್ನಿಯಿಂದ ನೇಣು ಹಾಕಿಕೊಂಡಿದ್ದು, ಆಗ ಪಕ್ಕದ ಮನೆಯವರಾದ ರಹೆಮತ್ , ನಾಗಮ್ಮ, ಮಹೇಬೂಬ ಎಂಬುವವರು ನೇಣು ಬಿಡಿಸಿರುತ್ತಾರೆ ಎಂದರೆ ಸಾಕ್ಷಿ ಅದನ್ನು ನಾನು ನೋಡಿಲ್ಲ ಆದರೆ ಸದರಿ ಘಟನೆಯಲ್ಲಿ ಪ್ರಜ್ಞೆ ತಪ್ಪಿದ್ದ ಚಾಸಾ-1 ರವರನ್ನು ನೋಡಲು ನಾನು ಆಸ್ಪತ್ರೆಗೆ ಹೋಗಿದ್ದೇನೆ ಎನ್ನುತ್ತಾರೆ. ಆರೋಪಿತರು ಕಿರುಕುಳ ಕೊಟ್ಟಿದ್ದರಿಂದಲೇ ಚಾಸಾ-1 ರವರು ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದಳು ಎನ್ನುವುದು ಸರಿ.

1 ಮತ್ತು 2 ನೇ ಆರೋಪಿತರು ಚಾಸಾ-1 ರವರಿಗೆ ಕಿರುಕುಳ ನೀಡಲು 3 ಮತ್ತು 4 ನೇ ಆರೋಪಿತರು ಪ್ರಚೋದನೆ ಕೊಟ್ಟಿದ್ದರು ಎನ್ನುವುದು ಸರಿ.

ಮೇಲ್ಕಂಡ ಎಲ್ಲಾ ವಿಚಾರಗಳನ್ನು ದಿನಾಂಕ 14-10-2017 ರಂದು ಪೋಲೀಸರ ಮುಂದೆ ನಾನು ಕೊಟ್ಟಿರುವ ಹೇಳಿಕೆಯಲ್ಲಿ ನಾನು ಹೇಳಿದ್ದೇನೆ ಎನ್ನುವುದು ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರಿಂದಃ**

ಚಾಸಾ-1 ನಮ್ಮ ಊರಿನವಳೇ ಆಗಿದ್ದರಿಂದ ನಾನು ಆಕೆಯಮದುವೆಗೆ ಹೋಗಿದ್ದೆ ಎನ್ನುವುದು ಸರಿ. ಚಾಸಾ-1 ಮತ್ತು ಅವರ ತಂದೆ ಚಾಸಾ-12 ಬಸ್ಸಯ್ಯನವರು ನನ್ನ ಖಾಸಾ ಪರಿಚಯಸ್ಥರು ಎಂದರೆ ಸರಿ.

ಆರೋಪಿತರು ಮತ್ತು ಚಾಸಾ-1 ರವರ ನಡುವೆ ನಾನು ಯಾವುದೇ ರೀತಿಯ ಪಂಚಾಯತಿ ಮಾಡದೇ ಇದ್ದರೂ ಸಹ ಚಾಸಾ-12 ರವರ ಮಾತು ಕೇಳಿ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಪ್ರಕರಣದ ಸಂಬಂಧ ನನಗೇನೂ ಗೊತ್ತಿಲ್ಲದಿದ್ದರೂ ಸಹ ಪೋಲೀಸರು ಮತ್ತು ಚಾಸಾ-12 ರವರು ಹೇಳಿದಂತೆ ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುವುದಕ್ಕೆ ಬಂದಿದ್ದೇನೆಂದರೆ ಸರಿಯಲ್ಲ.

ಆರೋಪಿತರು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟಿದ್ದರು ಎಂದು ನನ್ನ ಮುಂದೆ ಯಾವತ್ತೂ ಹೇಳಿಲ್ಲ ಎನ್ನುವುದು ಸರಿಯಲ್ಲ. ನನ್ನ ಪರಿಚಯಸ್ಥರು ಮತ್ತು ಊರಿನವರೇ ಆದ

ಚಾಸಾ-1 ಮತ್ತು 12 ರವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**